ಚಿತ್ರ ನನ್ನ ಬೆನ್ನ ಮೇಲೆ ಹೊತ್ತು ತಿರುಗಲು ನನಗೆ ಅಧಿಕಾರವಿಲ್ಲ ಎನ್ನುತ್ತೀಯಾ?"

"ಜೋಸಿಯದ್ದಾ?"

"ಹೌದು." ಜೋಸಿಯ ಹೆಸರು ಎತ್ತುತ್ತಲೇ ಹುಡುಗನ ದೇಹದೊಳಗೆ ಹೊಸ ಹುರುಪು ಮೂಡುತ್ತದೆ ಎಂದು ಡ್ರಿಯೋಲಿ ಅರಿತಿದ್ದ.

"ಹೇಯ್! ಬೇಡ ಬೇಡ..." ಜೋಸಿ ಹೌಹಾರಿದಳು.

"ಡಾರ್ಲಿಂಗ್, ಪ್ಲೀಸ್! ಈ ಬಾಟಲು ತಗೋ, ಕುಡಿದು ಮುಗಿಸಿ ಬಿಡು. ಅಷ್ಟರಲ್ಲಿ ನಿನ್ನ ಆಲೋಚನೆ ಬದಲಾಗಬಹುದು. ಇಂತಹ ಆಲೋಚನೆ ಎಲ್ಲೋ ಒಮ್ಮೊಮ್ಮೆ ಹೊಳೆಯುತ್ತವೆ ಕಣೆ!"

"ಎಂಥ ಆಲೋಚನೆ? ನನ್ನ ಪೋಟ್ರೇಟ್?"

"ಹೌದು. ನಿನ್ನ ಪೋಟ್ರೇಟ್. ನ್ಯೂಡ್ ಪೋಟ್ರೇಟ್."

"ಅದೇನು ಅಷ್ಟೊಂದು ಗಾಬರಿಯಾಗಿಬಿಟ್ಟೆ? ನ್ಯೂಡ್, ಏನು ವಿಶೇಷ? ಇದೊಂದು ಒರಿಜಿನಲ್ ಐಡಿಯಾ ಅಂತ ನಿನಗನಿಸೋದಿಲ್ಲವಾ?"

"ಇಲ್ಲ... ಇದೊಂದು ಕೀಳು ಅಭಿರುಚಿಯ ಆಲೋಚನೆ ಅಂತ ನನಗನಿಸುತ್ತದೆ."

"ನೀನಿನ್ನೂ ಯಾವ ಕಾಲದಲ್ಲಿದ್ದೇಯೇ ಜೋಸಿ? ಇಂತಾ ಅಸಂಪ್ರದಾಯಿಕ ಆಲೋಚನೆ ನನಗೆ ಹೊಳೆದಿದ್ದಕ್ಕೆ ನಾವು ನಿಜವಾಗಲೂ ಸಂಭ್ರಮಪಡಬೇಕು."

ಅವರ ಮಧ್ಯೆ ಮತ್ತೊಂದು ಬಾಟಲು ಖಾಲಿಯಾಗುತ್ತಲೇ ಹುಡುಗ ಹೇಳಿದ: "ಟ್ಯಾಟೂ ಹಚ್ಚಲು ನನ್ನಿಂದ ಖಂಡಿತ ಸಾಧ್ಯವಿಲ್ಲ. ನಿನ್ನ ಬೆನ್ನ ಮೇಲೆ ಪೇಂಟ್ ಮಾಡಲು ಬೇಕಾದರೆ ಹೇಳು, ಮಾಡುತ್ತೇನೆ. ನೀನು ಮುಂದೆಂದೂ ಸ್ನಾನ ಮಾಡುವುದಿಲ್ಲವೆಂದರೆ ಅದು ನೀನು ಸಾಯುವವರೆಗೂ ನಿನ್ನ ಬೆನ್ನ ಮೇಲಿರುತ್ತದೆ!"

"ಅದು ಖಂಡಿತ ಸಾಧ್ಯವಿಲ್ಲ." ದೃಢ ದನಿಯಲ್ಲಿ ಡ್ರಿಯೋಲಿ ಹೇಳಿದ.

"ನಾನು ನಿನ್ನ ಬೆನ್ನ ಮೇಲೆ ಜೋಸಿಯ ಭಾವಚಿತ್ರವನ್ನಷ್ಟೇ ಬಿಡಿಸುತ್ತೇನೆ. ನೀನು ಯಾವತ್ತು ಸ್ನಾನ ಮಾಡಿ ನಾನು ಬಿಡಿಸಿದ ಚಿತ್ರವನ್ನು ಅಳಿಸಿಹಾಕುತ್ತೀಯೋ ಆವತ್ತಿಗೆ ನನ್ನ ಕಲೆಯ ಬಗೆಗಿನ ನಿನ್ನ ಅಭಿಮಾನ ಮುಗಿಯಿತೆಂದು ಭಾವಿಸುತ್ತೇನೆ. ಒಂದರ್ಥದಲ್ಲಿ ಇದು ನಿನ್ನ ಪರೀಕ್ಷೆ ಕೂಡ!"

ಅರ್ಧ ಗಂಟೆಯೊಳಗೆ ಡ್ರಿಯೋಲಿ ವಾಪಸ್ಸು ಬಂದ. "ನೋಡು, ನನ್ನ ಎಲ್ಲಾ ಪರಿಕರಗಳು ಇಲ್ಲಿವೆ." ಅವನ ಕೈಯಲ್ಲಿ ಕಂದು ಬಣ್ಣದೊಂದು ಪೆಟ್ಟಿಗೆ ಇತ್ತು.

ಅವನು ಅದನ್ನು ಸೋಫಾದ ಮೇಲಿಟ್ಟು ಬಿಚ್ಚಿಟ್ಟ. ಅದರೊಳಗೆ ವಿವಿಧ ಗಾತ್ರದ ಎಲೆಕ್ಟ್ರಿಕ್ ಸೂಜಿಗಳಷ್ಟೇ ಅಲ್ಲದೆ ವಿವಿಧ ಬಣ್ಣಗಳ ಸೀಸೆಗಳೂ ಇದ್ದವು. ಡ್ರಿಯೋಲಿ ಒಂದು ಸೂಜಿ ಸಿಗಿಸಿದ್ದ ಕೈ ಮಶೀನನ್ನು ವಿದ್ಯುತ್ ಸಾಕೆಟಿಗೆ ಸಿಕ್ಕಿಸಿ ಚಾಲೂ ಮಾಡಿದ. ಮಂದವಾದ ಶಬ್ದವನ್ನು ಹೊರಡಿಸುತ್ತಾ ಕೈ ಮಶೀನಿನ ಸೂಜಿ ವೇಗವಾಗಿ ಅದುರತೊಡಗಿತು. ಡ್ರಿಯೋಲಿ ತನ್ನ ಕೋಟನ್ನು ಕಳಚಿ ಪಕ್ಕಕ್ಕಿಟ್ಟು ಶರಟಿನ ತೋಳನ್ನು ಮಡಚಿದ. "ನಾನೀಗ ನನ್ನ ಕೈಯ ಮೇಲೊಂದು ಚಿತ್ರ ಬಿಡಿಸುತ್ತೇನೆ. ಅದು ಎಷ್ಟು ಸುಲಭ ಅಂತ ನಿನಗೇ ಗೊತ್ತಾಗುತ್ತದೆ."

"ಈಗ ನಾನು ಹೇಳುವುದನ್ನು ಕೇಳು..." ಜೋಸಿ ಹೇಳಿದಳು. "ಅವನಿಗೆ ನಿನ್ನ ಚಿತ್ರಕಲೆಯ ಬಗ್ಗೆ ಎಷ್ಟೊಂದು ಗೌರವ ಇದೆಯೆಂದರೆ, ದರಿದ್ರದವನು ಸಾಯೋವರೆಗೂ ಸ್ನಾನ ಮಾಡದೇ ಇದ್ದರೂ ಇದ್ದ. ಅವನು ಹೇಳಿದ ಹಾಗೆ ಟ್ಯಾಟೂನೇ ಮಾಡೋ... ಆದರೆ, ಬೆತ್ತಲೆ ಅಂತು ಅಲ್ಲವೇ ಅಲ್ಲ."

"ಹಾಗಾದ್ರೆ ಜೋಸಿಯ ಮುಖವನ್ನಷ್ಟೇ ಪೇಂಟ್ ಮಾಡು." ಡ್ರಿಯೋಲಿ ಹೇಳಿದ.

"ಹೇ...! ಇಲ್ಲ, ಇಲ್ಲ. ನನ್ನಿಂದ ಸಾಧ್ಯವಿಲ್ಲ."

"ನೀನೇನೂ ಹೆದರಬೇಡ ಮಗಾ! ಟ್ಯಾಟೂ ಹುಯ್ಯುವುದೇನೂ ಅಂತಾ ಘನಂದಾರಿ ಕೆಲಸವಲ್ಲ.